ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:**27/2025**

ಪಿಡಬ್ಲ್ಯೂ-**1**
ಸಿಡಬ್ಲ್ಯೂ-**2**

ಸಾಕ್ಷಿಗೆ ದಿನಾಂಕ **26.06.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು : ಕುಮಾರ್

ತಂದೆಯ ಹೆಸರು : ಚಂದ್ರಪ್ಪ

ವಯಸ್ಸು : 36 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಗೂಳಿಹಟ್ಟಿ

<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>

ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇದ್ದು ಅವರು ನಮ್ಮ ಊರಿನವರು . ಚಾಸಾ-3 ರವರ ಪರಿಚಯ ಇರುತ್ತದೆ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದಾಗಿರುತ್ತದೆ. ಸದರಿ ದಾಖಲಾತಿಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-**1** ಎಂದು**,** ಸಾಕ್ಷಿಯ ಸಹಿಯನ್ನು ನಿಪಿ-**1(**ಎ**)** ಎಂದು ಗುರುತಿಸಲಾಯಿತು**.** ಒಂದು ಪೋಟೋವನ್ನು ನಿಪಿ-**2** ಎಂದು ಗುರುತಿಸಲಾಯಿತು**.** ನಿ.ಪಿ-1 ಕ್ಕೆ ನಾನು 6 ತಿಂಗಳ ಹಿಂದೆ ನಮ್ಮ ಗ್ರಾಮದಲ್ಲಿ ಪೋಲಿಸರ ಸೂಚನೆ ಮೇರೆಗೆ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತು ಮಾಡಿಕೊಂಡಿರುವುದಿಲ್ಲ. ನಿಪಿ-1 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-2 ರ ಪೋಟೋವನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>

ದಿನಾಂಕ 25.09.2024 ರಂದು ಸಂಜೆ 5-00 ಗಂಟೆಗೆ ನಾನು ಮತ್ತು ಚಾ.ಸಾ-3 ರವರು ಬಸ್ ನಿಲ್ದಾಣದಿಂದ ಊರ ಕಡೆಗೆ ಬರುವಾಗ ಅಲ್ಲಿಗೆ ಚಾ.ಸಾ-1 ರವರು ಬಂದಿದ್ದು ಚಾ.ಸಾ-1 ರವರಿಗೆ ನಮ್ಮ ಗೂಳಿಹಟ್ಟಿ ಗ್ರಾಮದ ಮೈಲಾರಪ್ಪ ತಂದೆ ಕೆಂಚಪ್ಪ ಇವರು ತನ್ನ ವಾಸದ ಮನೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮಧ್ಯದ ಪೌಚ್‌ಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು ದಾಳಿ ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ನಮಗೆ ಕೋರಿದ್ದು ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ಚಾ.ಸಾ-1 ಮತ್ತು ಸಿಬ್ಬಂದಿಗಳೊಡನೆ ಒಂದು ಖಾಸಗಿ ವಾಹನದಲ್ಲಿ ಮಾಹಿತಿ ಬಂದ ಆರೋಪಿ ಮನೆಯ ಹತ್ತಿರ ಇರುವ ಸಾರ್ವಜನಿಕ ಸ್ಥಳದ ಹತ್ತಿರ ಹೋಗಿ ಮರೆಯಲ್ಲಿ ನಿಂತು ನೋಡಿದಾಗ ಸದರಿ ಮೈಲಾರಪ್ಪ ತನ್ನ ವಾಸದ ಮನೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ತನ್ನ ಬಳಿ ಇರುವ ಮಧ್ಯದ ಪೌಚ್ ಗಳನ್ನು ಮಾರಾಟ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಸಮವಸ್ತ್ರದಲ್ಲಿ ಇದ್ದ ಅಧಿಕಾರಿಗಳನ್ನು ನೋಡಿ ಓಡಿ ಹೋಗುವಾಗ ಬೆನ್ನಟ್ಟಿ ಹಿಡಿದುಕೊಂಡರು ಎಂದರೆ ಸರಿಯಲ್ಲ . ಆತನನ್ನು ವಿಚಾರಿಸಿದಾಗ ತನ್ನ ಹೆಸರು ಮೈಲಾರಪ್ಪ ತಂದೆ ಕೆಂಚಪ್ಪ , 42 ವರ್ಷ ಗೂಳಿಹಟ್ಟಿ ಗ್ರಾಮ ಎಂದು ತಿಳಿಸಿದ್ದು , ಮಧ್ಯ ಮಾರಾಟ ಮಾಡಲು ಸರ್ಕಾರದ ಪರವಾನಗಿ ಇಲ್ಲ ಎಂದು ತಿಳಿಸಿದರು . ನಂತರ ಆತನ ಬಳಿ ಇದ್ದ ಚೀಲವನ್ನು ತೆಗೆದು ನೋಡಲಾಗಿ ಅದರಲ್ಲಿ 90 ಎಂ ಎಲ್ ನ 35 ರಾಜಾ ವಿಸ್ಕಿಯ ಪೌಚ್ ಗಳು ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಸದರಿ ಮಧ್ಯ ಸಂಗ್ರಹಣೆ ಮಾಡಿದ ಬಗ್ಗೆ ಆರೋಪಿ ಬಳಿ ಯಾವುದೇ ದಾಖಲೆ ಅಥವಾ ರಹದಾರಿಪತ್ರ ಇರುವುದಿಲ್ಲ ಎಂದು ಖಚಿತಪಡಿಸಿಕೊಂಡು ದೊರೆತ ಎಲ್ಲಾ 35 ಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮಾದರಿಗೆ ತೆಗೆದು ಚೀಲದಿಂದ ಸುತ್ತಿ ದಾರದಿಂದ ಕಟ್ಟಿ ಕೆ.ಎಸ್.ಪಿ ಎಂಬ ಅರಗು ಸೀಲು ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಮಹಜರ್ ಕ್ರಮವನ್ನು ನಿಪಿ-1 ರಂತೆ ಸಂಜೆ 5.20 ರಿಂದ 6.20 ರವರೆಗೆ ಬರೆದು ಮುಗಿಸಿದರು ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-2 ರಂತೆ ಪೋಟೋ ಸಹ ತೆಗೆದರು ಎಂದರೆ ನನಗೆ ಗೊತ್ತಿಲ್ಲ.

ಈಗ ಓದಿ ಹೇಳಿದಂತೆ ನಾನು ಈ ಬಗ್ಗೆ ದಿನಾಂಕ **26.09.2024** ರಂದು ಪೊಲೀಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ**.** ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ ನಿಪಿ-**3** ಎಂದು ಗುರುತಿಸಲಾಯಿತು**.**

ಆರೋಪಿ ನಮ್ಮ ಊರಿನವನಾದ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ದಾಳಿ ಸಮಯದಲ್ಲಿ ಹಾಜರಿದ್ದು ನಿಪಿ-3 ರಂತೆ ಹೇಳಿಕೆ ನೀಡಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ಶ್ರೀಮತಿ ಟಿ ಆರ್ ಎಸ್  ವಕೀಲರಿಂದ

**ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

(ಪ್ರಸನ್ನಕುಮಾರ್    ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ ಎಂ ಎಫ್ ಸಿ
ನ್ಯಾಯಾಲಯ,ಹೊಸದುರ್ಗ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:**27/2025**

ಪಿಡಬ್ಲ್ಯೂ-**2**
ಸಿಡಬ್ಲ್ಯೂ-**3**

ಸಾಕ್ಷಿಗೆ ದಿನಾಂಕ **26.06.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು : ಗಿರೀಶ್
ತಂದೆಯ ಹೆಸರು : ತಿಮ್ಮಪ್ಪ
ವಯಸ್ಸು : 38 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಗೂಳಿಹಟ್ಟಿ

<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>

ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇದ್ದು ಅವರು ನಮ್ಮ ಊರಿನವರು . ಚಾಸಾ-2 ರವರ ಪರಿಚಯ ಇರುತ್ತದೆ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದಾಗಿರುತ್ತದೆ. ಸದರಿ ದಾಖಲಾತಿಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನುಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು **,** ಸಾಕ್ಷಿಯ ಸಹಿಯನ್ನು ನಿಪಿ-**1(ಬಿ)** ಎಂದು ಗುರುತಿಸಲಾಯಿತು. ಒಂದು ಪೋಟೋವನ್ನು ನಿಪಿ-**2** ಎಂದು ಈಗಾಗಲೇ ಗುರುತಿಸಲಾಗಿದೆ **.** ನಿ.ಪಿ-1 ಕ್ಕೆ ನಾನು 1 ವರ್ಷದ ಹಿಂದೆ ನಮ್ಮ ಗ್ರಾಮದಲ್ಲಿ ಪೋಲಿಸರ ಸೂಚನೆ ಮೇರೆಗೆ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತು ಮಾಡಿಕೊಂಡಿರುವುದಿಲ್ಲ. ನಿಪಿ-1 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-2 ರ ಪೋಟೋವನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು**)**

## ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ

ದಿನಾಂಕ 25.09.2024 ರಂದು ಸಂಜೆ 5-00 ಗಂಟೆಗೆ ನಾನು ಮತ್ತು ಚಾ.ಸಾ-2 ರವರು ಬಸ್ ನಿಲ್ದಾಣದಿಂದ ಊರ ಕಡೆಗೆ ಬರುವಾಗ ಅಲ್ಲಿಗೆ ಚಾ.ಸಾ-1 ರವರು ಬಂದಿದ್ದು ಚಾ.ಸಾ-1 ರವರಿಗೆ ನಮ್ಮ ಗೂಳಿಹಟ್ಟಿ ಗ್ರಾಮದ ಮೈಲಾರಪ್ಪ ತಂದೆ ಕೆಂಚಪ್ಪ ಇವರು ತನ್ನ ವಾಸದ ಮನೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮದ್ಯದ ಪೌಚ್‌ಗಳನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು ದಾಳಿ ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ನಮಗೆ ಕೋರಿದ್ದು ನಾವು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ಚಾ.ಸಾ-1 ಮತ್ತು ಸಿಬ್ಬಂದಿಗಳೊಡನೆ ಒಂದು ಖಾಸಗಿ ವಾಹನದಲ್ಲಿ ಮಾಹಿತಿ ಬಂದ ಆರೋಪಿ ಮನೆಯ ಹತ್ತಿರ ಇರುವ ಸಾರ್ವಜನಿಕ ಸ್ಥಳದ ಹತ್ತಿರ ಹೋಗಿ ಮರೆಯಲ್ಲಿ ನಿಂತು ನೋಡಿದಾಗ ಸದರಿ ಮೈಲಾರಪ್ಪ ತನ್ನ ವಾಸದ ಮನೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ತನ್ನ ಬಳಿ ಇರುವ ಮದ್ಯದ ಪೌಚ್ ಗಳನ್ನು ಮಾರಾಟ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಸಮವಸ್ತ್ರದಲ್ಲಿ ಇದ್ದ ಅಧಿಕಾರಿಗಳನ್ನು ನೋಡಿ ಓಡಿ ಹೋಗುವಾಗ ಬೆನ್ನಟ್ಟಿ ಹಿಡಿದುಕೊಂಡರು ಎಂದರೆ ಸರಿಯಲ್ಲ . ಆತನನ್ನು ವಿಚಾರಿಸಿದಾಗ ತನ್ನ ಹೆಸರು ಮೈಲಾರಪ್ಪ ತಂದೆ ಕೆಂಚಪ್ಪ , 42 ವರ್ಷ ಗೂಳಿಹಟ್ಟಿ ಗ್ರಾಮ ಎಂದು ತಿಳಿಸಿದ್ದು , ಮದ್ಯ ಮಾರಾಟ ಮಾಡಲು ಸರ್ಕಾರದ ಪರವಾನಗಿ ಇಲ್ಲ ಎಂದು ತಿಳಿಸಿದರು . ನಂತರ ಆತನ ಬಳಿ ಇದ್ದ ಚೀಲವನ್ನು ತೆಗೆದು ನೋಡಲಾಗಿ ಅದರಲ್ಲಿ 90 ಎಂ ಎಲ್ ನ 35 ರಾಜಾ ವಿಸ್ಕಿಯ ಪೌಚ್ ಗಳು ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಸದರಿ ಮದ್ಯ ಸಂಗ್ರಹಣೆ ಮಾಡಿದ ಬಗ್ಗೆ ಆರೋಪಿ ಬಳಿ ಯಾವುದೇ ದಾಖಲೆ ಅಥವಾ ರಹದಾರಿಪತ್ರ ಇರುವುದಿಲ್ಲ ಎಂದು ಖಚಿತಪಡಿಸಿಕೊಂಡು ದೊರೆತ ಎಲ್ಲಾ 35 ಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಮಾದರಿಗೆ ತೆಗೆದು ಚೀಲದಿಂದ ಸುತ್ತಿ ದಾರದಿಂದ ಕಟ್ಟಿ ಕೆ.ಎಸ್.ಪಿ ಎಂಬ ಅರಗು ಸೀಲು ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಮಹಜರ್ ಕ್ರಮವನ್ನು ನಿಪಿ-1 ರಂತೆ ಸಂಜೆ 5.20 ರಿಂದ 6.20 ರವರೆಗೆ ಬರೆದು ಮುಗಿಸಿದರು ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-2 ರಂತೆ ಪೋಟೋ ಸಹ ತೆಗೆದರು ಎಂದರೆ ನನಗೆ ಗೊತ್ತಿಲ್ಲ.

ಈಗ ಓದಿ ಹೇಳಿದಂತೆ ನಾನು ಈ ಬಗ್ಗೆ ದಿನಾಂಕ **26.09.2024** ರಂದು ಪೊಲೀಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ ನಿಪಿ-**4** ಎಂದು ಗುರುತಿಸಲಾಯಿತು.

ಆರೋಪಿ ನಮ್ಮ ಊರಿನವನಾದ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ದಾಳಿ ಸಮಯದಲ್ಲಿ ಹಾಜರಿದ್ದು ನಿಪಿ-4 ರಂತೆ ಹೇಳಿಕೆ ನೀಡಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯ ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ಶ್ರೀಮತಿ ಟಿ ಆರ್ ಎಸ್ ವಕೀಲರಿಂದ

ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

(ಪ್ರಸನ್ನಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ ಎಂ ಎಫ್ ಸಿ
ನ್ಯಾಯಾಲಯ,ಹೊಸದುರ್ಗ.